ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

23

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 9-12-2020

# ಸದನದಲ್ಲಿ ಪ್ರತಿಧ್ವನಿಸಿದ ರೈತರ ಪ್ರತಿಭಟನೆ

**ವಿಧಾನಸಭೆ:** ದೇಶಾದ್ಯಂತ ರೈತರ ಪ್ರತಿಭಟನೆ ವಿಚಾರ ಮಂಗಳವಾರ ಸದನದಲ್ಲೂ ಪ್ರತಿಧ್ವನಿಸಿತು.

ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಕುರಿತ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ನಾವು ವಿರೋಧ ಮಾಡಿದರೂ ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆಗೆ ತಿದ್ದುಪಡಿ ತಂದು ರೈತರನ್ನು ಬೀದಿ ಪಾಲು ಮಾಡುತ್ತಿದ್ದೀರಿ. ಇದೀಗ ರೈತರು ದೇಶಾದ್ಯಂತ ರಸ್ತೆಗಿಳಿದು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಹೇಳಿದರು.

ಬಿಜೆಪಿ ಸದಸ್ಯರು, ಪ್ರತಿಭಟನೆ ಮಾಡುತ್ತಿರುವ ರೈತರನ್ನು ಎತ್ತಿ ಕಟ್ಟಲಾಗುತ್ತಿದೆ. ಅವರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಕೇಂದ್ರ ಸರ್ಕಾರ ರೈತರ ಪರ ಅವರಿಗೆ ಅನುಕೂಲ ಕಲ್ಪಿಸಲು ಕಾಯ್ದೆ ಜಾರಿಗೆ ತಂದಿದೆ ಎಂದು ಹೇಳಿದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿದ್ದರಾಮಯ್ಯ, ರೈತರನ್ನು ಯಾರೂ ದಿಕ್ಕು ತಪ್ಪಿಸಲು ಸಾಧ್ಯವಿಲ್ಲ, ಅಕ್ಷರ ಕಲಿಯದ ರೈತರು ದೇಶಕ್ಕೆ ಅನ್ನ ಕೊಡುವವರು. ನಮಗಿಂತ ಅವರು ಬುದ್ಧಿವಂತರು ಎಂದು ಹೇಳಿದರು.

ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ನೀವು ತಂದಿರುವ ಕಾಯ್ದೆ ಒಳ್ಳೆಯದಾದರೆ ಪ್ರತಿಭಟನಾ ನಿರತ ರೈತರ ಬಳಿ ಹೋಗಿ ಯಾಕೆ ಹೇಳುತ್ತಿಲ್ಲ, ಅವರ ಮನವೊಲಿಸಿ ಎಂದು ತಿರುಗೇಟು ನೀಡಿದರು.

ಸಹಕಾರ ಸಚಿವ ಜೆ.ಸಿ.ಮಾಧುಸ್ವಾಮಿ, ಎಪಿಎಂಸಿ ವಿಚಾರದಲ್ಲಿ ನಿಮ್ಮ ನಿಲುವೇನು ಎಂದು ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದರು. ಎಪಿಎಂಸಿಯಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ. ರೈತರು ಎಲ್ಲಿ ಬೇಕಾದರೂ ಉತ್ಪನ್ನ ಮಾರಾಟಕ್ಕೆ ಅವಕಾಶ ಇರಬೇಕು ಎಂದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಬರೆದಿದ್ದ ಪತ್ರ ಸದನದಲ್ಲಿ ಪ್ರದರ್ಶಿಸಿದರು. ಬಸವರಾಜ ಬೊಮ್ಮಾಯಿ ಸಹಿತ ಬಿಜೆಪಿ ಸದಸ್ಯರು, ಇದು ಕಾಂಗ್ರೆಸ್‌ನ ದ್ವಿಮುಖ ನೀತಿಯಲ್ಲವೇ ಎಂದು ಲೇವಡಿ ಮಾಡಿದರು.

ಆ ಪತ್ರ ತರಿಸಿಕೊಂಡ ಸಿದ್ದರಾಮಯ್ಯ, ನಾನು ಹಣ್ಣು ಮತ್ತು ತರಕಾರಿಯನ್ನು ಎಲ್ಲಿ ಬೇಕಾದರೂ ಮಾರಾಟ ಮಾಡಲು ಅವಕಾಶ ಇರಬೇಕು ಎಂದು ಹೇಳಿದ್ದೆ. ಅದಕ್ಕೆ ನಾನು ಬದ್ಧ. ಆದರೆ, ಎಲ್ಲ ಉತ್ಪನ್ನಗಳ ವಿಚಾರದಲ್ಲಿ ಹೇಳಿಲ್ಲ ಎಂದು ಸಮಜಾಯಿಷಿ ನೀಡಿದರು.

# ಭೂ ಸುಧಾರಣೆ ಕಾಯ್ದೆ: ತಾಯಿ, ಮಕ್ಕಳನ್ನು ಬೇರ್ಪಡಿಸಿದಂತೆ

**ವಿಧಾನ ಪರಿಷತ್ತು:** 'ಕರ್ನಾಟಕ ಭೂ ಸುಧಾರಣಾ ಎರಡನೇ ತಿದ್ದುಪಡಿ ವಿಧೇಯಕ'ದ ಮೂಲಕ ಸರ್ಕಾರವು ತಾಯಿ-ಮಕ್ಕಳನ್ನು (ಭೂಮಿ ಮತ್ತು ರೈತ) ಬೇರ್ಪಡಿಸಿ, ಕೊನೆಗೆ ತಾಯಿಯನ್ನೇ ಮಾರಾಟಕ್ಕಿಡಲು ಹೊರಟಿದೆ ಎಂದು ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಮೇಲ್ಮನೆಯಲ್ಲಿ ಮಂಗಳವಾರ ವಿಧೇಯಕದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ, ಉದ್ದೇಶಿತ ವಿಧೇಯಕವು ಕರಾಳ ಶಾಸನವಾಗಿದ್ದು ರೈತರ ಶವದ ಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆದಂತಾಗಲಿದೆ. ಆದ್ದರಿಂದ ಸರ್ಕಾರ ಇದನ್ನು ಹಿಂಪಡೆಯಬೇಕು. ಜನಾಭಿಪ್ರಾಯ ಪಡೆದು, ಮುಂದುವರಿಯಬೇಕು. ಇದು ರೈತರ ಅಸ್ತಿತ್ವದ ಪ್ರಶ್ನೆಯಾಗಿರುವುದರಿಂದ ವಿಶೇಷ ಅಧಿವೇಶನ ನಡೆಸಿ, ಅಲ್ಲಿ ಸುದೀರ್ಘ ಚರ್ಚೆ ನಡೆಸಬೇಕೆಂದು ಆಗ್ರಹಿಸಿದರು.

**ನಕ್ಸಲೈಟ್ ಮಾಡ್ಬೇಡಿ:** ಕಾಂಗ್ರೆಸ್ ಸದಸ್ಯ ಆರ್.ಬಿ. ತಿಮ್ಮಾಪುರ ಮಾತನಾಡಿ, ಈ ಹಿಂದೆ ದೇವರಾಜ ಅರಸು ಅವರು ಉಳುವವನನ್ನು ಭೂ ಒಡೆಯನನ್ನಾಗಿ ಮಾಡಿದ್ದರು. ಈಗ ಉಳ್ಳವರಿಗೆ ಭೂಮಿಯ ಒಡೆತನ ನೀಡಲು ಸರ್ಕಾರ ಹೊರಟಿರುವುದು ವಿಪರ್ಯಾಸ. ಈ ಕಾಯ್ದೆ ಮೂಲಕ ಬಡವರನ್ನು ನಕ್ಸಲರನ್ನಾಗಿ ಮಾಡುವ ಸ್ಥಿತಿ ಸೃಷ್ಟಿಸಬೇಡಿ ಎಂದರು.